# ಕರ್ನಾಟಕ ವಿಧಾನ ಪರಿಷತ್ತು
## ನೂರ ಮೂವತ್ತಮೂರನೆಯ ಅಧಿವೇಶನ
## (ಮುಂದುವರೆದ ಉಪವೇಶನಗಳು)

**ಕಾರ್ಯಕಲಾಪಗಳ ಪಟ್ಟಿ**

**ಗುರುವಾರ, ದಿನಾಂಕ:16ನೇ ನವೆಂಬರ್, 2017**
**(ಸಮಯ: ಬೆಳಗ್ಗೆ:11.00 ಗಂಟೆಗೆ)**

******

### 01. ಪ್ರಶ್ನೋತ್ತರ

**ಅ)** ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು : ಇಪ್ಪತ್ತೇಳನೆಯ ಪಟ್ಟಿ

**ಆ)** ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು : ಇಪ್ಪತ್ತೇಳನೆಯ ಪಟ್ಟಿ

### 02. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಕಾರ್ಯದರ್ಶಿಯವರು ಸಭೆಯ ಮುಂದಿಡುವುದು.

01. **ಅಂತರ್-ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆ (ತಿದ್ದುಪಡಿ) ವಿಧೇಯಕ, 2017**
02. **ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ತಿದ್ದುಪಡಿ) ವಿಧೇಯಕ, 2017**
03. **ಕರ್ನಾಟಕ ಕೆಲವು ಅಧಿನಿಯಮಗಳನ್ನು ನಿರಸನಗೊಳಿಸುವ ವಿಧೇಯಕ, 2017**

### 03. ವಿತ್ತೀಯ ಕಾರ್ಯಕಲಾಪಗಳು

**ಶ್ರೀ ಸಿದ್ಧರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು) ಅವರು:-**

ಭಾರತ ಸಂವಿಧಾನದ 205(1)(ಎ)ರ ಅನುಚ್ಛೇದದ ಮೇರೆಗೆ 2017-2018ನೇ ಸಾಲಿನ ಪೂರಕ ಅಂದಾಜುಗಳನ್ನು (ಎರಡನೇ ಕಂತನ್ನು) ಒಪ್ಪಿಸುವುದು.

### 04. ಶಾಸನ ರಚನೆ

**ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು**

**ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ವಿಧೇಯಕ, 2017**

**ಶ್ರೀ ಹೆಚ್.ಎಂ. ರೇವಣ್ಣ** (ಮಾನ್ಯ ಸಾರಿಗೆ ಸಚಿವರು) ಅವರು:-

ಅ) ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017ನೇ ಸಾಲಿನ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು;

ಆ) ಹಾಗೂ ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುವುದು.

..2..

## ೦೫. ಗಮನ ಸೆಳೆಯುವ ಸೂಚನೆಗಳು

ಅ. **ಶ್ರೀ ಕೆ.ಬಿ. ಶಾಣಪ್ಪ** ಅವರು ಹೈದರಾಬಾದ್-ಕರ್ನಾಟಕದ ಆರು ಜಿಲ್ಲೆಗಳಿಗೆ 371(ಜೆ) ಸಂವಿಧಾನದ 71 ವಿಶೇಷ ಸ್ಥಾನಮಾನ ಕೊಟ್ಟರೂ ಸಹ ಇದುವರೆವಿಗೂ ಯಾವುದೇ ಪ್ರಕಾರದ ನೇಮಕಾತಿ ಪ್ರಕ್ರಿಯೆ ನಡೆಯದೇ ಇರುವುದರಿಂದ ಸರ್ಕಾರದ ನಿಯಮದ ಪ್ರಕಾರ ವಯೋಮಿತಿಯನ್ನು ಸಡಿಲಗೊಳಿಸಿ, ಬೇರೆ ರಾಜ್ಯಗಳಲ್ಲಿ ಪ್ರತಿ ವರ್ಗದ ಅಭ್ಯರ್ಥಿಗಳಿಗೆ 2 ವರ್ಷಗಳ ವಯೋಮಿತಿಯನ್ನು ಸಡಿಲಿಸಿರುವಂತೆ ನಮ್ಮ ರಾಜ್ಯದಲ್ಲಿಯೂ ಜಾರಿಗೊಳಿಸುವ ಬಗ್ಗೆ **ಮಾನ್ಯ ಮುಖ್ಯಮಂತ್ರಿಗಳ** ಗಮನ ಸೆಳೆಯುವುದು.

ಆ. **ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ)** ಅವರು ಬೆಳಗಾವಿ ಜಿಲ್ಲೆಯು ಬಹುತೇಕ ನೇಕಾರಿಕೆ ಜಿಲ್ಲೆಯಾಗಿದ್ದು, ಇಲ್ಲಿಯ ಕೂಲಿ ಕಾರ್ಮಿಕರು, ಬಡ ನೇಕಾರರು ಹಾಗೂ ಅಸಂಘಟಿತ ನೇಕಾರರುಗಳು ಅನೇಕ ವರ್ಷಗಳಿಂದ ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿರುವ ಬಗ್ಗೆ **ಮಾನ್ಯ ಜವಳಿ ಹಾಗೂ ಮುಜರಾಯಿ ಸಚಿವರ** ಗಮನ ಸೆಳೆಯುವುದು.

## ೦೬. ನಿಯಮ ೩೩೦ರ ಮೇರೆಗೆ

ಅ. **ಶ್ರೀ ಕೆ.ಸಿ. ಕೊಂಡಯ್ಯ** ಅವರು ಕರ್ನಾಟಕ ರಾಜ್ಯದಲ್ಲಿ ಜಾರಿಗೆ ತರಲಾಗಿರುವ ಶಿಕ್ಷಣ ಹಕ್ಕು ಕಾಯ್ದೆ (ಆರ್.ಟಿ.ಇ) ಯೋಜನೆಯನ್ನು ಕೇರಳ ಮಾದರಿಯಲ್ಲಿ ಕರ್ನಾಟಕ ರಾಜ್ಯದಲ್ಲಿಯೂ ಅನುಸರಿಸುವ ಸಂಬಂಧ ತಿದ್ದುಪಡಿ ತರುವ ಬಗ್ಗೆ ಪ್ರಸ್ತಾಪಿಸುವುದು. **(ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು)**

ಆ. **ಶ್ರೀ ಕೋಟ ಶ್ರೀನಿವಾಸ ಪೂಜಾರಿ** ಅವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ನೌಕರರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ, ಪಿ.ಎಫ್., ಇ.ಎಸ್.ಐ. ಸೌಲಭ್ಯ, ಬಾಪೂಜಿ ಸೇವಾ ಕೇಂದ್ರಗಳಿಗೆ ಕಂಪ್ಯೂಟರ್ ಒದಗಿಸುವುದು, ಈ-ಸ್ವತ್ತುಗಳಲ್ಲಿನ ಗೊಂದಲ ನಿವಾರಣೆ, ಪಿ.ಡಿ.ಓ. ಹುದ್ದೆಗಳನ್ನು ಮೇಲ್ದರ್ಜೆಗೇರಿಸುವುದು ಇತ್ಯಾದಿ ಆಡಳಿತಾತ್ಮಕ ಸಮಸ್ಯೆಗಳ ಬಗ್ಗೆ ಪ್ರಸ್ತಾಪಿಸುವುದು. **(ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ(ಪ್ರ)**

---

ಪ್ರತಿ ದಿನದ ವಿಧಾನ ಪರಿಷತ್ತಿನ ಕಾರ್ಯಕಲಾಪಗಳ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿಯೂ ಸಹ ಪಡೆದುಕೊಳ್ಳಬಹುದು.

**www.kla.kar.nic.in/council.htm**